ಎನ್ನುವುದು ಸೀಮಿತ ಅರ್ಥದಲ್ಲಿ ನಿಜವಾದರೂ, ಪ್ರಕಾರಗಳ ವಿಷಯದಲ್ಲಿ ಲೇಖಕನಿಗೆ ಆಯ್ಕೆಯ ಸ್ವಾತಂತ್ರ್ಯವಿರುತ್ತದೆಯೆನ್ನುವುದನ್ನೂ ಮರೆಯಲಾಗದು. ಹಾಗೆಯೇ ಪ್ರತಿಭಾವಂತ ಸಾಹಿತಿ ಪ್ರಕಾರಗಳ ಮಿತಿಗಳನ್ನು ಮೀರಲು ಸತತವಾಗಿ ಪ್ರಯತ್ನಿಸುತ್ತಾನೆ. ಇಷ್ಟೇ ಅಲ್ಲದೆ, ಒಂದೇ ವಸ್ತುವನ್ನು ಬೇರೆ ಬೇರೆ ಪ್ರಕಾರಗಳಲ್ಲಿ ಅಭಿವ್ಯಕ್ತಿಸಿದ ಉದಾಹರಣೆಗಳೂ ಇವೆ. ಡಿ.ಎಚ್. ಲಾರೆನ್ಸ್ ಇದಕ್ಕೊಂದು ಒಳ್ಳೆಯ ಉದಾಹರಣೆ. ಕವಿತೆ, ಕಾದಂಬರಿ ಹಾಗೂ ನಾಟಕ ಈ ಮೂರೂ ಪ್ರಕಾರಗಳಲ್ಲಿಯೂ ತನ್ನ ಮೂಲಭೂತ ಅನುಭವಕ್ಕೆ ರೂಪು ಕೊಡಲು ಅವನು ಪ್ರಯತ್ನಿಸಿದ್ದುಂಟು. ಹಳೆಯ ಪ್ರಕಾರಗಳು ಕಳೆಗುಂದಿ ಅಥವಾ ಅದೃಶ್ಯವಾಗಿ ಹೊಸ ಪ್ರಕಾರಗಳು ಹುಟ್ಟಿಕೊಳ್ಳುವುದೂ ಉಂಟು.

ಸಣ್ಣಕತೆ ಕಾದಂಬರಿಗೊಂದು ಪರ್ಯಾಯ ಎಂಬ ಬೋರ್ಹೆಸ್‌ನ ಅಭಿಪ್ರಾಯವನ್ನು ಎತ್ತಿಹಿಡಿಯುತ್ತ ಅತಿ ಸಣ್ಣಕತೆ ಸಣ್ಣಕತೆಗೆ ಪರ್ಯಾಯ ಎಂದೆನಿಸುತ್ತದೆ ಎಂದಿದ್ದಾರೆ. ಆದರೆ, ನನಗೆನಿಸುವ ಮಟ್ಟಿಗೆ ಈ ಮೂರೂ ಕಥನದ ಸ್ವತಂತ್ರ ಪ್ರಕಾರಗಳೇ. ರಹಸ್ಯಮಯತೆ ಸೃಜನಶೀಲ ಸಾಹಿತ್ಯದ ಒಂದು ಮುಖ್ಯ ಗುಣವೇ ಆಗಿದ್ದರೂ, ಅತಿ ಸಣ್ಣಕತೆಯಲ್ಲಿ ಇದರ ಪರಾಕಾಷ್ಠೆಯಿದೆ. ಮೊಂತೆರ್ರೋಸೋನ ವಿಶ್ವವಿಖ್ಯಾತ ಅತಿ ಸಣ್ಣಕತೆಯ ('ಅವನಿಗೆ ಎಚ್ಚರವಾದಾಗ ಡೈನೊಸಾರ್ ಇನ್ನೂ ಅಲ್ಲಿಯೇ ಇತ್ತು') ವ್ಯಾಖ್ಯಾನ ಎಷ್ಟು ಕಠಿನವಾದುದು ಎನ್ನುವುದನ್ನು ಸ್ವತಃ ದಿವಾಕರ ಅವರೇ ತೋರಿಸಿದ್ದಾರೆ. ಅವರು ಕೇಳಿದ ಪ್ರಶ್ನೆಗಳಿಗೆ ನಮ್ಮವೇ ಆದ ಪ್ರಶ್ನೆಗಳನ್ನೂ ಸೇರಿಸಬಹುದು.

> **ಈ ಪ್ರಬಂಧ ವ್ಯಾನ್ ಗೋನಿಗೆ ಸೀಮಿತವಾಗಿಲ್ಲ. ಸೂರ್ಯಕಾಂತಿಯ ಚರಿತ್ರೆ, ಪ್ರಬೇಧಗಳು, ಅದರ ಸುತ್ತ ಬೆಳೆದಿರುವ ಕತೆಗಳು ಎಲ್ಲವನ್ನೂ ಒಳಗೊಂಡು ಬೆಳೆಯುತ್ತ ಹೋಗುತ್ತದೆ.**

ಶ್ರೇಷ್ಠ ಕಾವ್ಯ ತನ್ನ ರಹಸ್ಯಗಳನ್ನು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಮನೋಹರ ಗ್ರಂಥಮಾಲೆಯ ಅಟ್ಟದ ಮೇಲೆ ಮಾತನಾಡುತ್ತ ಬೇಂದ್ರೆಯವರು 'ಕವಿ ತನ್ನ ಅರ್ಥವನ್ನು ಮುಚ್ಚಿಟ್ಟಿರುತ್ತಾನೆ' ಎಂದು ಹೇಳಿದಾಗ ಅವರು ಧ್ವನಿತತ್ವವನ್ನು ಪ್ರತಿಪಾದಿಸುತ್ತಿದ್ದಾರೆ ಎನ್ನುವುದು ಹೊಳೆಯದೆ ನಾನೊಂದು ಪ್ರಶ್ನೆ ಕೇಳಿ ಅವರನ್ನು ಸಿಟ್ಟಿಗೆಬ್ಬಿಸಿದ್ದೆ. ಧ್ವನಿ ಕಾವ್ಯದ ಶ್ರೇಷ್ಠ ಗುಣವಾದರೆ 'ಸ್ಫುಟತೆ' ಗದ್ಯದ ಶ್ರೇಷ್ಠ ಗುಣ. ಈ ಗುಣವನ್ನು ಸಾಧಿಸಲು ರಾಮಾನುಜನ್‌ರು ಎಷ್ಟು ಶ್ರಮ ವಹಿಸುತ್ತಿದ್ದರೆನ್ನುವುದನ್ನು ಪ್ರಸ್ತಾಪಿಸುತ್ತ, ದಿವಾಕರ್ ಅವರು "ಹಾಗೆ ಮಾಡುವುದರಿಂದ ಗದ್ಯ ಸ್ವತಃ ಬಿಗಿಯಾಗಿ ಎಷ್ಟು ಹೇಳಬೇಕೋ ಅಷ್ಟನ್ನು ಕರಾರುವಾಕ್ಕಾಗಿ, ಸ್ಫುಟವಾಗಿ ಹೇಳುವುದು ಸಾಧ್ಯ" ಎಂದು ಹೇಳಿದ್ದಾರೆ. (ಪು.113). ಎಜ್ರಾ ಪೌಂಡ್ ಈ ತತ್ವವನ್ನು ಕಾವ್ಯಕ್ಕೂ ಅನ್ವಯಿಸಿದ. ಇದರ ಪರಿಣಾಮವಾಗಿ ಎಲಿಯಟ್‌ನ 'ದಿ ವೇಸ್ಟ್ ಲ್ಯಾಂಡ್' ಮೂಲದ ಎಷ್ಟೋ ಭಾಗಗಳನ್ನು ಬಿಡುವಂತಾಯಿತು.

ದಿವಾಕರರ ಈ ಪುಸ್ತಕದ ಬಗ್ಗೆ ಇನ್ನೂ ಹೇಳುವುದು ಸಾಕಷ್ಟಿದೆ. ಉದಾಹರಣೆಗೆ ಸಂಗೀತದ ಅವರ ಅನುಭವ ಮತ್ತು ಜ್ಞಾನ. ನವೋದಯ ಕಾಲದ ಶ್ರೇಷ್ಠ ಸಾಹಿತಿಗಳಲ್ಲಿ ಬಹಳಷ್ಟು ಜನರಿಗೆ ಸಂಗೀತದಲ್ಲಿ ಆಸಕ್ತಿ ಸಾಮಾನ್ಯವಾಗಿತ್ತು. ಆದರೆ, ನಮ್ಮ ತಲೆಮಾರಿನ ಲೇಖಕರಲ್ಲಿ ಶಂಕರ ಮೊಕಾಶಿಯವರಂಥ ಒಬ್ಬಿಬ್ಬರನ್ನು ಬಿಟ್ಟರೆ, ಇದೊಂದು ವಿಶೇಷವೇ.